# "ಶೂನ್ಯ ನೆರಳಿನ ದಿನ"

**ದಿನಾಂಕ:** 04.05.2024 ರಂದು **ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ, ಶಂಕ್ರಪ್ಪ ಸಕ್ರಿ ಪ್ರೌಢಶಾಲೆ, ಬಾಗಲಕೋಟೆ** ಹಾಗೂ **ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೇಸನೂರು ತಾ||ಜಿ||ಬಾಗಲಕೋಟೆ** ಇವರ ಸಂಯುಕ್ತ ಆಶ್ರಯದಲ್ಲಿ **"ಶೂನ್ಯ ನೆರಳಿನ ದಿನ"** ಎಂಬ ಖಗೋಳ ವಿಜ್ಞಾನ ಕಾರ್ಯಕ್ರಮವನ್ನು ಆಯೋಜಿಸಲಾಯಿತು, ಈ ಕಾರ್ಯಕ್ರಮದಲ್ಲಿ ಶಂಕ್ರಪ್ಪ ಸಕ್ರಿ ಪ್ರೌಢಶಾಲೆ, ಬಾಗಲಕೋಟೆ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೇಸನೂರು ತಾ||ಜಿ||ಬಾಗಲಕೋಟೆಯ **ಒಟ್ಟು** 25 ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ **ಡಾ. ರಾಮಚಂದ್ರ ನಾಯಕ್,** ಡೀನ್ ವಿದ್ಯಾರ್ಥಿ ಕಲ್ಯಾಣ, ತೋ.ವಿ.ವಿ. ಬಾಗಲಕೋಟೆ ಹಾಗೂ ಸದಸ್ಯರು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ಮತ್ತು ಇತರ ಗಣ್ಯರು **ಸಸಿಗೆ ನೀರುಣಿಸುವ** ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮುಂದುವರೆದು, ಉದ್ಘಾಟಕರ ಭಾಷಣ ಮಾಡಿದ **ಡಾ. ರಾಮಚಂದ್ರ ನಾಯಕ್,** ಡೀನ್ ವಿದ್ಯಾರ್ಥಿ ಕಲ್ಯಾಣ, ತೋ.ವಿ.ವಿ. ಬಾಗಲಕೋಟೆ ಹಾಗೂ ಸದಸ್ಯರು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು, ವಿದ್ಯಾರ್ಥಿಗಳಿಗೆ ''ಶೂನ್ಯ ನೆರಳಿನ ದಿನ'' ದ ಕೌತುಕದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡುತ್ತ, ದಿನ ನಿತ್ಯದ ಓದಿನ ಜೊತೆಗೆ ಸದರಿ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳು ನೀಡುವ ವಿವರವಾದ ಮಾಹಿತಿಗಳನ್ನು ತಿಳಿದುಕೊಂಡು ಖಗೋಳ ವಿಜ್ಞಾನದ ಮೇಲೆಯು ಕೂಡ ಹೆಚ್ಚಿನ ಆಸಕ್ತಿಯನ್ನು ವಹಿಸುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅದರಂತೆ, ಮುಂದುವರೆದು, ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ **ಶ್ರೀ ವಿಜಯಕುಮಾರ ಕೆ.** ವಿಜ್ಞಾನ ಶಿಕ್ಷಕರು, **ಶಂಕ್ರಪ್ಪ** ಸಕ್ರಿ ಪ್ರೌಢಶಾಲೆ (ಅನುದಾನಿತ), ಬಾಗಲಕೋಟೆರವರು ಮಾತನಾಡಿ, **"ಶೂನ್ಯ ನೆರಳಿನ ದಿನ"**ದ ಮಹತ್ವ ಹಾಗೂ ಅದರ ಹಿಂದಿನ ವಿಜ್ಞಾನವನ್ನು ವಿದ್ಯಾರ್ಥಿಗಳಿಗೆ ವಿವರವಾಗಿ ತಿಳಿಸಿದರು. ಅದರಂತೆ, ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದಂತೆ ವಿವಿಧ ಆಕಾಶ ಕಾಯಗಳು, ನಕ್ಷತ್ರ ಪುಂಜಗಳು ಮತ್ತು ಇನ್ನುಳಿದ ಖಗೋಳ ವಿಜ್ಞಾನದ ಸ್ವಾರಸ್ಯಕರ ಮಾಹಿತಿಗಳನ್ನು ವಿವರವಾಗಿ ತಿಳಿಸಿದರು.

ಮುಂದುವರೆದು, ವಿದ್ಯಾರ್ಥಿನಿಯಾದ **ಕುಮಾರಿ ಇಂಚರಾ ವಿ.ಕೆ.** ರವರು ಕಾರ್ಯಕ್ರಮದ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸುತ್ತ ಸದರಿ ಕಾರ್ಯಕ್ರಮವನ್ನು ಆಯೋಜಿಸಿದಕ್ಕಾಗಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಎಲ್ಲ ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ತಿಳಿಸಿದರು.

ಸದರಿ ಕಾರ್ಯಕ್ರಮದ ಅಂಗವಾಗಿ ಸೂರ್ಯನ ಚಲನೆಯನ್ನು ವಿಶೇಷ ಸೂರ್ಯ ಮಸೂರಗಳನ್ನು ಬಳಸಿಕೊಂಡು ನೋಡಲಾಯಿತು ಹಾಗೂ ಮಧ್ಯಾಹ್ನ 12.24 ಘಂಟೆಗೆ ಸೂರ್ಯನ ಕಿರಣಗಳು ಲಂಬವಾಗಿ ಬೀಳುವ ಮೂಲಕ ಸಂಭವಿಸಿದ ಶೂನ್ಯ ನೆರಳನ್ನು ಪ್ರಾಯೋಗಿಕ ಚಟುವಟಿಕೆಯ ಮೂಲಕ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ವಿವರವಾಗಿ ತಿಳಿದುಕೊಂಡರು.

ಅದರಂತೆ, ಸದರಿ ಕಾರ್ಯಕ್ರಮವನ್ನು **ಶ್ರೀ ಈರಣ್ಣ ಬುಳ್ಳಾ,** ಕ್ಯೂರೇಟರ್, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ನಿರೂಪಿಸಿ ಹಾಗೂ **ಶ್ರೀ ಆಸೀಫ ಬಾಗವಾನ,** ತಾಂತ್ರಿಕ ಸಹಾಯಕರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ವಂದಿಸಿದರು.

**ಮುಂದುವರೆದು,** ಸದರಿ ಕಾರ್ಯಕ್ರಮದಲ್ಲಿ, **ಶ್ರೀ ಗಂಗನಗೌಡ ಪಾಟೀಲ,** ದ್ವಿ.ದ.ಸಹಾಯಕರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




SRSC/BGK/01/01/2020-21


SRSC/BGK/01/01/2020-21


SRSC/BGK/01/01/2020-21















*************